ಅ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಗ್ರಾಮ ಪಂಚಾಯ್ತಿ, ತಾಲ್ಲೂಕ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ ಸ್ಥಾನಗಳ ಸಂಖ್ಯೆಯು ಸದರಿ ಪ್ರದೇಶಗಳಲ್ಲಿ ಅನುಸೂಚಿತ ಜಾತಿಗಳ : ಅನುಸೂಚಿತ ಪಂಗಡಗಳ ಜನಸಂಖ್ಯೆಯು ಆಯಾಯಾ ಪ್ರದೇಶದಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಯಾವ ಅನುಪಾತದಲ್ಲಿರುವುದೋ ಹಾಗೆ ಮೀಸಲಿಡಲಾದ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ ಸರಿ ಸುಮಾರು ಅದೇ ಅನುಪಾತದಲ್ಲಿರುವುದು.

ಇ) ಕರ್ನಾಟಕ ಪಂಚಾಯತ್ ರಾಜ್ಯ (ತಿದ್ದುಪಡಿ) ಸುಗ್ರೀವಾಜ್ಞೆ 1995ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣದ 2ನೇ ಉಪಪ್ರಕರಣದ ಪರಂತುಕ ಹಾಗೂ 123ನೇ ಪ್ರಕರಣದಲ್ಲಿನ (1)ನೇ ಉಪ ಪ್ರಕರಣದ ಪರಂತುಕವನ್ನು ಕೈಬಿಡಲಾಗಿದ್ದು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಕನಿಷ್ಟ ಮಿಸಲಾತಿಯನ್ನು ತೆಗೆದು ಹಾಕಲ್ಪಟ್ಟಿದ್ದರಿಂದ 1993ರ ಅಂತ್ಯದಲ್ಲಿ ಪ್ರಕಟಿಸಲಾದ ಸ್ಥಾನಮಾನಗಳ ಸಂಖ್ಯೆಯಲ್ಲಿ ಹಾಗೂ ಫೆಬ್ರವರಿ 95ರಲ್ಲಿ ಪ್ರಕಟಿಸಲಾಗಿರುವ ಸ್ಥಾನಗಳ ಸಂಖ್ಯೆಯಲ್ಲಿ ವ್ಯತ್ಯಾಸ ಉಂಟಾಗಿದೆ.

ವಿಷಯ : ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯಲ್ಲಿ ಜಾತಿಗೆ ಸೇರಿದ ನ್ಯಾಯಾಧೀಶರುಗಳ ಸಂಖ್ಯೆ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 173(492)

ಶ್ರೀ.ಎಂ.ಹೆಚ್. ಜಯಪ್ರಕಾಶ್ ನಾರಾಯಣ್ (ಯಲಹಂಕ)

ಮಾನ್ಯ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವರು.

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕರ್ನಾಟಕ ರಾಜ್ಯದಲ್ಲಿರುವ ವಿವಿಧ ದರ್ಜೆಯ ನ್ಯಾಯಾಲಯಗಳಾವುವು?

ಆ) ಅವುಗಳಲ್ಲಿ ನೇಮಕಗೊಂಡಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸೇರಿದ ನ್ಯಾಯಾಧೀಶರುಗಳೆಷ್ಟು (ಅವರುಗಳ ಪೂರ್ಣ ಪಟ್ಟಿ ಒದಗಿಸುವುದು)

ಇ) ಶೇಕಡಾ 18ರ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಪ್ರಾತಿನಿಧ್ಯವನ್ನು ಒದಗಿಸಿಕೊಡಲು ಸರ್ಕಾರದವರು ಕೈಗೊಂಡಿರುವ ವಿಶೇಷ ಕ್ರಮಗಳೇನು?

ಶ್ರೀ. ಎಂ.ಸಿ. ನಾಣಯ್ಯ
ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು.

ಅ) ಕರ್ನಾಟಕ ರಾಜ್ಯದಲ್ಲಿ ಕೆಳಕಂಡ ಮೂರು ವರ್ಗಗಳ ನ್ಯಾಯಾಲಯಗಳಿವೆ.

1. ಜಿಲ್ಲಾ ನ್ಯಾಯಾಲಯಗಳು.

2. ಸಿವಿಲ್ ನ್ಯಾಯಾಲಯಗಲು.

3. ಮುನ್ಸಿಫ್ ನ್ಯಾಯಾಲಯಗಳು.

ಇದರ ಜೊತೆಗೆ ಬೆಂಗಳೂರು ನಗರದಲ್ಲಿ ಜಿಲ್ಲಾ ನ್ಯಾಯಾದೀಶರು ಮತ್ತು ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸಿಟಿ ಸಿವಿಲ್ ನ್ಯಾಯಾಲಯ ಹಾಗೂ ಲಘು ವ್ಯಾಜ್ಯಗಳ ನ್ಯಾಯಾಲಯಗಳು ಇವೆ.

1. ಜಿಲ್ಲಾ ನ್ಯಾಯಾಧೀಶರು
   ಪರಿಶಿಷ್ಟ ಜಾತಿ 8
   ಪರಿಶಿಷ್ಟ ಪಂಗಡ ಇಲ್ಲ

2. ಸಿವಿಲ್ ನ್ಯಾಯಾಧೀಶರು
   ಪರಿಶಿಷ್ಟ ಜಾತಿ 3
   ಪರಿಶಿಷ್ಟ ಪಂಗಡ ಇಲ್ಲ

3. ಮುನ್ಸಿಫ್ ನ್ಯಾಯಾಧೀಶರ
   ಪರಿಶಿಷ್ಟ ಜಾತಿ 31
   ಪರಿಶಿಷ್ಟ ಪಂಗಡ 9

ಇ) ಇದುವರೆಗೆ ಜರುಗಿಸಿರುವ ವಿಶೇಷ : ಕ್ರಮ ನೇರ ನೇಮಕಾತಿಯಲ್ಲಿ ಮುನ್ಸಿಫರ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಶೇ. 18ರಷ್ಟು ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ. 3ರಷ್ಟು ಮೀಸಲಾತಿ ಹುದ್ದೆಗಳನ್ನು ನೀಡುವಲ್ಲಿ ಪ್ರಾತಿನಿಧ್ಯವನ್ನು ಉಳಿಸಿಕೊಂಡು ಬಂದಿದೆ.

ವಿಷಯ: ಚಾಮರಾಜಪೇಟೆಯಲ್ಲಿರುವ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪನಿರ್ದೇಶಕರ ಕಛೇರಿ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 174(451)

ಶ್ರೀ. ಬಿ.ಎನ್. ನಂಜೇಗೌಡ (ಬಸವನಗುಡಿ)

ಮಾನ್ಯ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಾಮರಾಜಪೇಟೆಯಲ್ಲಿರುವ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕರ ಕಚೇರಿ ದಕ್ಷಿಣ ವಲಯದಲ್ಲಿ ಕೆಲಸಗಳ ಹೊರೆಯು ಹೆಚ್ಚಾಗಿದ್ದು, ಸದರಿ